ಈ ಕೃಷಿ ಹೊಂಡಗಳು ಸಾಮಾನ್ಯವಾಗಿ ವರ್ಷದಲ್ಲಿ ಎರಡು ಸಲ ತುಂಬುವದರಿಂದ ಕೃಷಿ ಹೊಂಡದ ಗಾತ್ರದ ಎರಡರಷ್ಟು ನೀರು ಕೃಷಿ ಉಪಯೋಗಕ್ಕೆ ಲಭ್ಯವಿರುತ್ತದೆ. ಕೃಷಿ ಹೊಂಡದಲ್ಲಿ ಸಂಗ್ರಹವಾದ ಈ ನೀರು

ಅಮೂಲ್ಯವಾದದು ಅದನ್ನು ದಕ್ಷತೆಯಿಂದ ಜಾಣತನದಿಂದ ಬಳಸಬೇಕು. ಆದ್ದರಿಂದ ಈ ಕೃಷಿ ಭಾಗ್ಯ ಯೋಜನೆಯಲ್ಲಿ ಹೊಂಡದಲ್ಲಿ ಸಂಗ್ರಹಣೆಯಾದ ನೀರು ಇಂಗಿಹೊಗದಂತೆ ತಡೆಗಟ್ಟಲು ಕೃಷಿ ಹೊಂಡಕ್ಕೆ ಪಾಲಥೀನ್ ಹೊದಿಕೆ ಅಳವಡಿಸುವ ಅವಕಾಶವನ್ನು ಕಲ್ಪಿಸಲಾಗುವುದು. ಆಳವಾದ ಕಪ್ಪು ಮಣ್ಣು ಪ್ರದೇಶದಲ್ಲಿ ಕೃಷಿ ಹೊಂಡಗಳಿಗೆ ಪಾಲಿಥೀನ್

ಕೃಷಿ ಭಾಗ್ಯದ ಈ ಎಲ್ಲಾ ಅವಕಾಶಗಳನ್ನು ಸದಪಯೋಗ ಪಡಿಸಿಕೊಂಡು ಮಳೆಯಾಶ್ರಿತ ಪ್ರದೇಶಗಳಲ್ಲಿ ಕೃಷಿ ಹೊಂಡಗಳು ಸಾಕಾರಗೊಂಡರೆ ಒಣ ಬೇಸಾಯದಲ್ಲಿ ಬೆಳೆಯ ಸಂದಿಗ್ಧ ಹಂತಗಳಾದ ಹೂವಾಡುವ ಹಾಗೂ ಕಾಳುಕಟ್ಟುವ ಹಂತಗಳಲ್ಲಿ ಬೆಳೆಗಳಿಗೆ ಬರದ ಛಾಯೆ / (ನೀರಿನ ತೇವಾಂಶದ ಕೊರತೆ) ಉಂಟಾಗದಂತೆ ಕೃಷಿ ಹೊಂಡದ ನೀರನ್ನು ಬಳಸಿಕೊಳ್ಳವುದರಿಂದ ಬೆಳೆಗಳ ಇಳುವರಿಯಲ್ಲಿ ಶೇ.30 ರಿಂದ 50 ರಷ್ಟು ಹೆಚ್ಚಿನ ಇಳುವರಿಯನ್ನು ಪಡೆಯಬಹುದು ಜೊತೆಗೆ ಕೆಳಗಿನ ಕೆಲವು ಪೂರಕ ಉಪಯೋಗಗಳನ್ನೂ ಪಡೆಯಬಹುದು.

**<u>ಕೃಷಿ ಹೊಂಡದ ಪೂರಕ ಉಪಯೋಗಗಳು :–</u>**

- ಕೃಷಿ ಹೊಂಡದಿಂದ ಹೆಚ್ಚುವರಿ ನೀರಿನ ಲಭ್ಯತೆ ಇದ್ದರೆ ಮಳೆಗಾಗಿ ಕಾಯದೆ ಸರಿಯಾದ ಕಾಲಕ್ಕೆ ಬಿತ್ತನೆಯನ್ನು ಮಾಡಬಹುದು ಅಲ್ಲದೆ ಒಂದು ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಬೆಳೆಯನ್ನು ಬೆಳೆದು ಕೃಷಿಯ ಉತ್ಪಾದಕತೆಯನ್ನು ಹೆಚ್ಚಿಸಬಹುದು. ಹಾಗೂ ಕೃಷಿಯ ಜೊತೆಗೆ ಹಲವಾರು ಪೂರಕ ಚಟುವಟಿಕೆಗಳನ್ನು ಮಾಡಬಹುದು. ಉದಾಹರಣೆಗೆ ಪಶು ಸಂಗೋಪನೆ, ಮೀನು ಸಾಕಾಣಿಕೆ, ಜೇನು ಸಾಕಾಣಿಕೆ ಮುಂತಾದವುಗಳಿಂದ ಕೃಷಿಯಲ್ಲಿ ಸುಸ್ಥಿರತೆಯನ್ನು ಕಂಡುಕೊಳ್ಳಬಹುದಾಗಿದೆ.
- ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಅನುಕೂಲಮಾಡಿಕೊಡುತ್ತವೆ.
- ಕೃಷಿ ಹೊಂಡವನ್ನು ತೊಡುವಾಗ ದೊರೆಯುವ ಮಣ್ಣು ತುಂಬಾ ಉತ್ಕೃಷ್ಟವಾಗಿದ್ದು ಕೃಷಿ ಕ್ಷೇತ್ರದ ಭೂಮಿಯನ್ನು ಉತ್ತಮಗೊಳಿಸಲು, ಸಮತಟ್ಟು ಮಾಡಲು ಹಾಗೂ ಕೃಷಿ ಕ್ಷೇತ್ರದಲ್ಲಿ ರಸ್ತೆಯನ್ನು ಮಾಡಲು ಬಳಸಬಹುದಾಗಿದೆ.
- ಕೃಷಿ ಹೊಂಡದ ಸುತ್ತಲಿನ ಜಾಗದಲ್ಲಿ ಕೃಷಿ ಕುಟುಂಬಕ್ಕೆ ಬೇಕಾಗುವ ತರಕಾರಿ ಹಣ್ಣು–ಹಂಪಲುಗಳನ್ನು ಬೆಳೆದು ಹೆಚ್ಚುವರಿ ಉತ್ಪಾದನೆಯಿಂದ ಆದಾಯವನ್ನು ಪಡೆಯಬಹುದು.
- ಹೊಂಡದ ಸುತ್ತ ತೋಟಗಾರಿಕೆ ಗಿಡಗಳಾದ ಹುಣಸೆ, ಹಲಸು, ಬೆಟ್ಟದ ನೆಲ್ಲಿ, ಲಿಂಬೆ, ಸೀಬೆಗಳನ್ನು ಅಥವಾ ಅರಣ್ಯ ಸಸಿಗಳಾದ ನೆರಳೆ, ಟೀಕ್, ಸಿಲ್ವರ್ ಓಕ್ ಮರಗಳನ್ನು ಬೆಳೆದು ಮರಮುಟ್ಟು ಸಾಮಾನ ಮತ್ತು ಉರುವಲು ಸೌಧೆಯನ್ನು ಪಡೆಯಬಹುದು. ಇವುಗಳ ಜೊತೆಗೆ ಸಿಗ್ನಲ್, ನೆಪಿಯರ್, ಗಿನಿ, ರೋಡ್ಸ ಮುಂತಾದ ಹುಲ್ಲುಗಳನ್ನು ಬೆಳೆಸುವ ಮೂಲಕ ದನಕರುಗಳ ಮೇವನ್ನು ಪಡೆಯುವುದರ ಜೊತೆಗೆ ಮಣ್ಣಿನ ಸವಕಳಿಯಿಂದ ಕೃಷಿ ಹೊಂಡದಲ್ಲಿ ತುಂಬಿಕೊಳ್ಳುವ ಮಣ್ಣನ್ನು ತಡೆಯ ಬಹುದಲ್ಲದೆ, ಹೊಂಡವನ್ನು ಸದೃಡವಾಗಿ ಕಾಪಾಡಿಕೊಳ್ಳಬಹುದಾಗಿದೆ. ಮರಗಳನ್ನು ನೆಡುವುದರಿಂದುಂಟಾಗುವ ನೆರಳಿನಿಂದಾಗಿ ಹೊಂಡದ ನೀರು ಹಾವಿಯಾಗುವುದನ್ನು ತಡೆಯಬಹುದಾಗಿದೆ.


**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**
**ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು**
ಅಂಚೆ ಪೆಟ್ಟಿಗೆ ಸಂಖ್ಯೆ– 329
ರಾಯಚೂರು– 584101
e-Mail: kvkraichur@gmail.co.in
kvk.Raichur@icar.gov.in
Website: www.kvkraichur.com



**ಅಕ್ಷರ ಜೋಡಣೆ ಮತ್ತು ವಿನ್ಯಾಸ:**
ಶ್ರೀ ದೇವರಾಜ ನಾಯಕ
ಕುಮಾರಿ ಸುಮಂಗಳಮ್ಮ ಎಮ್. ಮತ್ತು ಕುಮಾರಿ ಶಿಲ್ಪಾ



UASR/PC/LL-Agron-16/2017-18


# ಕೃಷಿ ವಿಶ್ವವಿದ್ಯಾಲಯ
# ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ
# ರಾಯಚೂರು

## ಕೃಷಿ ಹೊಂಡ – ರೈತರಿಗೆ ವರದಾನ




**ಲೇಖಕರು:**
**ಶ್ರೀಮತಿ. ಶ್ವೇತ ಬಿ.ಎನ್.**
**ಡಾ. ಎಂ. ವಿ. ರವಿ**

**ಸಂಪಾದಕರು:**
ಡಾ. ರವಿ ಎಮ್.ವಿ.
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಕೆ.ವಿ.ಕೆ, ರಾಯಚೂರು

ನಮ್ಮ ದೇಶವು ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಇಲ್ಲಿನ ಕೃಷಿ ಮುಖ್ಯವಾಗಿ ಮಳೆ ಆಧಾರಿತವಾಗಿದೆ. ಇಲ್ಲಿನ ಸರಾಸರಿ ಮಳೆಯ ಪ್ರಮಾಣ 1200 ಮೀಲಿ ಮೀಟರ್ ಇದ್ದು ಇದು ಪ್ರಾಂತ್ಯ ಮತ್ತು ಕಾಲದಲ್ಲಿ ವ್ಯತ್ಯಾಸವಾಗುವುದರಿಂದ ವಿವಿಧ ಕ್ಷೇತ್ರಗಳಿಗೆ ದೊರೆಯುವ ನೀರಿನ ಪ್ರಮಾಣದ ಮೇಲೆ ಪರಿಣಾಮ ಬೀರುತ್ತದೆ. ಶೇಕಡಾ 80 ರಷ್ಟು ನೀರಿನ ಬಳಕೆ ಕೃಷಿ ಕ್ಷೇತ್ರಕ್ಕೆ ಉಪಯೋಗಿಸಲ್ಪಡುತ್ತಿದ್ದು, ಉಳಿದ ಶೇಕಡಾ 20 ರಷ್ಟು ನೀರಿನ ಪ್ರಮಾಣವನ್ನು ಕುಡಿಯುವ ನೀರಿಗಾಗಿ ಹಾಗೂ ಕೈಗಾರಿಕೆ ಕ್ಷೇತ್ರದಲ್ಲಿ ಬಳಕೆಯಾಗುತ್ತದೆ. ಪ್ರತಿಯೊಬ್ಬರಿಗೆ ದೊರೆಯುವ ನೀರಿನ ಪ್ರಮಾಣ ದಿನದಿಂದ ದಿನಕ್ಕೆ ಕುಂಠಿತವಾಗುತ್ತಿದೆ. ಇದರ ಜೊತೆಗೆ ವಾತಾವರಣದ ವೈಪರಿತ್ಯದಿಂದಾಗಿ ಪದೆ ಪದೇ ಪ್ರವಾಹದ ಹಾಗೂ ಬರಗಾಲದ ಭೀತಿಯು ಅಧಿಕವಾಗುವ ಸಾಧ್ಯತೆಗಳುಂಟು. ಇದು ಆಹಾರೋತ್ಪಾದನೆಯ ಮೇಲೂ ಆಗಾಧವಾದ ಪರಿಣಾಮ ಬೀರುವುದು.

ನಮ್ಮ ದೇಶದಲ್ಲಿನ ಆಹಾರೋತ್ಪಾದನೆಯು ಮುಖ್ಯವಾಗಿ ನೀರಾವರಿಯಿಂದ ಬರುತ್ತಿದ್ದು (ಶೇಕಡಾ 60 ರಷ್ಟು) ಮಳೆಯಾಶ್ರಿತ ಪ್ರದೇಶದಿಂದ ಶೇಕಡಾ 40ರಷ್ಟು ಆಹಾರೋತ್ಪಾದನೆಯಾಗುತ್ತದೆ. ನೀರಾವರಿ ಕ್ಷೇತ್ರದಲ್ಲಿ ಹಿಗಾಗಲೇ ಇಳುವರಿಯು ಅಧಿಕ ಮಟ್ಟವನ್ನು ಮುಟ್ಟಿದ್ದು ಮಳೆಯಾಶ್ರಿತ ಪ್ರದೇಶಗಳಲ್ಲಿ ಇಳುವರಿಯನ್ನು ಹೆಚ್ಚಿಸಲು ಸಾಕಷ್ಟು ಅವಕಾಶಗಳಿದ್ದು ನಮ್ಮ ದೇಶದ ಆಹಾರೋತ್ಪದನೆಯನ್ನು ಅಧಿಕಗೊಳಿಸಬಹುದಾಗಿದೆ. ಏಕೆಂದರೆ ಮಳೆಯಾಶ್ರಿತ ಪ್ರದೇಶದವು ಶೇಕಡಾ 55 ರಷ್ಟು ಸಾಗುವಳಿ ಕ್ಷೇತ್ರವನ್ನು ಹೊಂದಿದ್ದು ಶೇಕಡಾ 40 ರಷ್ಟು ಆಹಾರೋತ್ಪಾದನೆಗೆ ಸಹಾಯಕವಾಗಿದೆ ಹಾಗೂ ಶೇಕಡಾ 60 ರಷ್ಟು ಪಶು ಸಂಗೋಪನೆಗೆ ಸಹಕಾರಿಯಾಗಿರುವುದರ ಜೊತೆಗೆ ಶೇಕಡಾ 80 ರಷ್ಟು ದ್ವಿದಳ ದಾನ್ಯಗಳು ಮತ್ತು ಎಣ್ಣೆ ಕಾಳುಗಳ ಉತ್ಪಾದನೆಯ ಆಗರವಾಗಿದೆ. ಇಷ್ಟೊಂದು ಸಂಪನ್ಮೂಲವನ್ನು ಹೊಂದಿರುವ ಮಳೆಯಾಶ್ರಿತ ಪ್ರದೇಶಗಳಲ್ಲಿನ ಅತ್ಯಲ್ಪ ಹಾಗೂ ಅಸರ್ಮಕವಾದ ಮಳೆಯ ಪ್ರಮಾಣದಿಂದಾಗಿ ಬೆಳೆ ಉತ್ಪಾದನೆಗೆ ಹೊಡೆತ ಬೀಳುವುದರ ಜೊತೆಗೆ ಈ ಪ್ರದೇಶಗಳು ತೀವ್ರವಾದ ಭೂ–ಸವಕಳಿಯಿಂದ ಹಾಗೂ ರೈತರ ಸಾಮಾಜಿಕ ಮತ್ತು ಆರ್ಥಿಕ ದುಸ್ಥಿತಿಯಿಂದ ಬಳಲುತ್ತಿರುವವು.

ಇಂತಹ ಪರಿಸ್ಥಿತಿಯಲ್ಲಿ ಮಳೆ ನೀರು ಕೋಯ್ಲು ಪ್ರಮುಖವಾದ ಪಾತ್ರವನ್ನುವಹಿಸುತ್ತದೆ. ಕೊಚ್ಚಿ ಹೋಗುವ ಮಳೆ ನೀರನ್ನು ಸಂಗ್ರಹಿಸಲು ರೈತರ ಮಟ್ಟದಲ್ಲಿ ಹಲವಾರು ಅವಕಾಶಗಳಿದ್ದು ಅವುಗಳ ಅಳವಡಿಕೆಯಿಂದ ಮಳೆ ನೀರನ್ನು ಸದ್ಬಳಕೆ ಅಥವಾ ಸದ್ವಿನಿಯೋಗ ಮಾಡಿಕೊಳ್ಳಬಹುದಾಗಿದೆ. ಅವುಗಳಲ್ಲಿ ಪ್ರಮುಖವಾದ ಕ್ರಮಗಳೆಂದರೆ :ಸಮಪಾತಳಿ ಬದುಗಳನ್ನು ನಿರ್ಮಿಸುವುದು, ಹುಲ್ಲುಗಳಿಂದ ಜೀವಂತ ಬದುಗಳ ನಿರ್ಮಾಣ, ಅಲ್ಲಲ್ಲಿ ತಟ್ಟೆಯಾಕಾರದ ಗುಣಿಗಳು,ಚೌಕು ಮಡಿಗಳ ನಿರ್ಮಾಣ,ಬೆಳೆಯುಳಿಕೆಗಳನ್ನು ಹರಡುವುದು ಮುಂತಾದವುಗಳು,

ಈ ಕ್ರಮಗಳನ್ನು ಅನುಸರಿಸುವುದರಿಂದ ಮಳೆ ನೀರು ಬಿದ್ದ ಸ್ಥಳದಲ್ಲಿ ಸಾಕಷ್ಟು ಇಂಗಲು ಅವಕಾಶ ಮಾಡಿಕೊಟ್ಟಂತಾಗುವುದರಿಂದ ಬೆಳೆಗಳಿಗೆ ಸಾಕಷ್ಟು ತೇವಾಂಶ ಸಿಗಲು ಸಾಧ್ಯವಾಗುತ್ತದೆ ಅಲ್ಲದೆ ಮಣ್ಣಿನ ಸವಕಳಿಯನ್ನು ತಪ್ಪಿಸಿದಂತಾಗುತ್ತದೆ. ಆದರೆ ಈ ಎಲ್ಲಾ ಕ್ರಮಗಳನ್ನು ತೆಗೆದುಕೊಂಡರೂ ಕೂಡ ಬಹಳಷ್ಟು ಪ್ರಮಾಣದಲ್ಲಿ ಮಳೆಯ ನೀರು ಹೊಲದಿಂದ ಹೊರಗೆ ಹರಿದು ಹೋಗುತ್ತದೆ. ಹೀಗೆ ಅನಾವಶ್ಯಕವಾಗಿ ಹೊರಗೆ ಹರಿದು ಹೋಗುವ ಹೆಚ್ಚಿನ ಪ್ರಮಾಣದ ಮಳೆ ನೀರನ್ನು ಹೊಂಡಗಳಲ್ಲಿ ಶೇಖರಿಸಿ ಬೆಳೆಯ ಅವಧಿಯಲ್ಲಿ ಉಂಟಾಗುವ ತೇವಾಂಶದ ಕೊರತೆಯನ್ನು ಒಂದರೆಡು ರಕ್ಷಣಾತ್ಮಕ ನೀರಾವರಿಯನ್ನು ಒದಗಿಸುವುದರಿಂದ ಹೊಗಲಾಡಿಸಲು ಅನುಕೂಲವಾಗಿ ಇಳುವರಿಯನ್ನು ಹೆಚ್ಚಿಸಲು ಹಾಗೂ ಕೃಷಿಯಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳಲ್ಲು ಅವಕಾಶವಾಗುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಕೃಷಿ ತಾಕಿನಲ್ಲೂ ಒಂದು ಕೃಷಿ ಹೊಂಡ ಸಾಕಾರವುಗುವುದು ಇಂದಿನ ಅವಶ್ಯಕತೆಯಾಗಿದೆ

ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಜನಪ್ರಿಯ ಯೋಜನೆಯಾದ **“ಕೃಷಿ ಭಾಗ್ಯ”** ಉತ್ತಮ ಆಶಾದಾಯಕವಾದ ಯೋಜನೆಯಾಗಿದ್ದು ಒಣ ಬೇಸಾಯದ ಭೂಮಿಯಲ್ಲಿ ಕೃಷಿ ಹೊಂಡಗಳನ್ನು ತೆಗೆಸುವ ಕಾರ್ಯವು ಈಗಾಗಲೆ ಚಾಲ್ತಿಯಲ್ಲಿದೆ. ಈ ಯೋಜನಯಲ್ಲಿ ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಪದ್ಧತಿಯಿಂದ. ಬಿದ್ದ ಮಳೆ ನೀರನ್ನು ವ್ಯರ್ಥ ಮಾಡದಂತೆ ಆಯ್ದ ಸ್ಥಳದಲ್ಲಿ ಕೃಷಿ ಹೊಂಡ ತೆಗೆದು ಜಲ ಸಂಗ್ರಹಿಸಿ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸಿ ಕೃಷಿ ಉತ್ಪಾದಕತೆಯನ್ನು ಉತ್ತಮ ಪಡಿಸಿವುದು ಮತ್ತು ಆದಾಯವನ್ನು ಹೆಚ್ಚಿಸುವುದರ ಮುಖಾಂತರ ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಿಸುವುದಾಗಿದೆ.

**ಕೃಷಿ ಭಾಗ್ಯ ಯೋಜನೆಯಡಿ ಒದಗಿಸಲಾಗುವ ಸೌಲಭ್ಯಗಳ ವಿವರಗಳು :–**

- ನೀರು ಸಂಗ್ರಹಣೆ ರಚನೆ (ಕೃಷಿ ಹೊಂಡ)
- ನೀರು ಇಂಗದಂತೆ ತಡೆಯಲು ಪಾಲಿಥೀನ ಹೊದಿಕೆ.
- ಹೊಂಡದಿಂದ ನೀರು ಎತ್ತಲು ಡಿಸೇಲ್ / ಸೋಲಾರ್ ಪಂಪ್‌ಸೆಟ್ ಹಾಗೂ ನೀರನ್ನು ಬೆಳೆಗೆ ಹಾಯಿಸಲು ಲಘು ನೀರಾವರಿ ( ಹನಿ/ತುಂತುರು)

ಕೃಷಿ ಭಾಗ್ಯ ಯೋಜನೆಯಲ್ಲಿ ಇಳಿಮೇಡು ಪ್ರದೇಶ ಹಾಗೂ ಮಳೆಯ ಹಂಚಿಕೆಗೆ ಅನುಗುಣವಾಗಿ ಕೃಷಿ ಹೊಂಡದ ಗಾತ್ರವನ್ನು ನಿಗದಿಪಡಿಸಿದೆ. ಕೃಷಿ ಹೊಂಡದ ಗಾತ್ರವು 10x10x3, 12x12x3, 15x15x3, 18x18x3, & 21x21x3 ಮೀ ನಷ್ಟಿರುತ್ತದೆ. ಆದರೆ ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ಗಾತ್ರವನ್ನು ಅಳವಡಿಸಿಕೊಳ್ಳಬಹುದಾಗಿದೆ. ಕೃಷಿ ಹೊಂಡವನ್ನು ಕ್ಷೇತ್ರದ ಸ್ವಾಭಾವಿಕ ತಗ್ಗು ಪ್ರದೇಶದಲ್ಲಿಯೇ ಮಾಡುವುದು ಒಳ್ಳೆಯದು. ಕೃಷಿ ಹೊಂಡದ ವಿಸ್ತೀರ್ಣವು ಒಂದು ವರ್ಷಕ್ಕೆ ಆ ಪ್ರದೇಶದಲ್ಲಿ ಹರಿದು ಹೋಗುವ ಹೆಚ್ಚುವರಿ ಮಳೆ ನೀರನ್ನು ಕನಿಷ್ಟ ಶೇಕಡಾ 50 ರಷ್ಟು ಸಂಗ್ರಹಿಸುವ ಸಾಮರ್ಥ್ಯವನ್ನು ಹೊಂದಿರಬೇಕು. ಹೊಂಡವನ್ನು ತೋಡುವಾಗ ಹೊರ ತೆಗೆದ ಸ್ವಲ್ಪ ಭಾಗ ಮಣ್ಣನ್ನು ಕೃಷಿ ಹೊಂಡದ ಸುತ್ತಲೂ ಬದು ಹಾಕುವುದಕ್ಕೆ ಉಪಯೋಗಿಸಿಕೊಳ್ಳಬೇಕು.

ಹೊದಿಕೆ ಅಳವಡಿಸುವ ಅವಶ್ಯಕತೆ ಇರುವುದಿಲ್ಲ. ಸಾಮಾನ್ಯ ರೈತರಿಗೆ ಶೇ. 80 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಶೇ.90 ರ ಸಹಾಯಧನ ನೀಡಲಾಗಿದೆ.

ಜೊತಗೆ ಕೃಷಿ ಹೊಂಡದಲ್ಲಿ ಸಂಗ್ರಹಣೆಯಾದ ನೀರನ್ನು ಬಳಸಿಕೊಳ್ಳಲು ಗರಿಷ್ಟ 5 ಹೆಚ್.ಪಿ. ಸಾಮರ್ಥ್ಯದ ಡೀಸೆಲ್ ಪಂಪ್‌ಸೆಟ್‌ನ್ನು ಇಲಾಖೆಯ ಕೃಷಿ ಯಾಂತ್ರೀಕರಣ ಯೋಜನೆಯಡಿ ಒದಗಿಸುವ ಅವಕಾಶವು ಇದೆ. ಕೃಷಿ ಹೊಂಡದಲ್ಲಿ ಸಂಗ್ರಹವಾದ ಈ ನೀರು ಅಮೂಲ್ಯವಾದದು ಆದ್ದರಿಂದ ಆ ನೀರನ್ನು ಸಾಂಪ್ರದಾಯಿಕ ಪದ್ಧತಿಗಳಾದ ಹಾಯಿ ನೀರಾವರಿಯನ್ನು ಅಳವಡಿಸುವದರಿಂದ ಬಹಳಷ್ಟು ನೀರು ಪೋಲಾಗುವುದನ್ನು ತಡೆಯಲು ಸೂಕ್ಷ್ಮ ನೀರಾವರಿ ಪದ್ಧತಿಗಳಾದ ತುಂತುರು ಅಥವಾ ಹನಿ ನೀರಾವರಿಗಳ ಅಳವಡಿಕೆಯು ಕೃಷಿ ಹೊಂಡದ ನೀರಿನ ಸದ್ಬಳಕೆಗೆ ಸಹಾಯಕವಾಗುವುದು.